ನೀಡಲು ರೂ. 5.00 ಲಕ್ಷ ವೆಚ್ಚ ಮಾಡಲಾಗಿದೆ.

ಆ) ಇಲ್ಲ

ಇ) ರೂ. 30.00 ಲಕ್ಷಗಳನ್ನು ಕಚ್ಚಾ ವಸ್ತು ವಿತರಣೆ, ಕುಶಲಕಲಾ ರಾಜ್ಯ ಪ್ರಶಸ್ತಿ ಹಾಗೂ ಪ್ರಶಂಸನಾ ಪತ್ರಗಳ ವಿತರಣೆಗೆ ಹಾಗೂ ಕೆಳಕಂಡ ಅಲ್ಪ ಪರಿಚಿತ ಕಲಾವಸ್ತುಗಳ ಉತ್ಪನ್ನಗಳ ಮಾರಾಟದಲ್ಲಿ ರಿಯಾಯಿತಿ ನೀಡಲು ಪೂರ್ಣವಾಗಿ ಉಪಯೋಗಿಸಲಾಗಿದೆ.

1.	ಕಿನ್ನಾಳ ಕಲೆ	– 208 ಕುಶಲಕರ್ಮಿಗಳು
2.	ನವಲಗುಂದ ಕಾರ್ಪೆಟ್	– 42 ಕುಶಲಕರ್ಮಿಗಳು
3.	ಕನ್ನಡಿ ಮತ್ತು ಕಸೂತಿ ಕಲೆ	– 150 ಕುಶಲಕರ್ಮಿಗಳು
4.	ಕಂಚಿನ ಕಲೆ	– 56 ಕುಶಲಕರ್ಮಿಗಳು
5.	ಬಿದ್ರಿ ಕಲೆ	– 250 ಕುಶಲಕರ್ಮಿಗಳು

ಅನುದಾನದ ಬಾಕಿ ಉಳಿದಿರುವುದಿಲ್ಲ.

ಭೂಮಾಪನ ಇಲಾಖೆಯ ಶುಲ್ಕ

298 (282) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) :– (ಮಾನ್ಯ ಕಂದಾಯ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ 20 ವರ್ಷಗಳಿಂದ ಜಾರಿಯಲ್ಲಿದ್ದ ಎಫ್.ಎಂ.ಬಿ. ಶುಲ್ಕವನ್ನು 6 ರೂಪಾಯಿಗಳಿಂದ 600 ರೂಪಾಯಿಗಳಿಗೆ ಏಕಾಏಕಿ ಏರಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಬಂದಿದ್ದಲ್ಲಿ, ಇದರಿಂದ ಜನ ಸಾಮಾನ್ಯರಿಗೆ ತೊಂದರೆಯಾಗಿರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಭೂಮಾಪನ ಇಲಾಖೆಯಲ್ಲಿ ನೀಡಲಾಗುವ ಎಲ್ಲಾ ರೀತಿಯ ನಕ್ಷೆಗಳಿಗೆ ಏಕರೂಪದ ದರ ವಿಧಿಸಿ ಬಡ ರೈತರಿಗೆ ಉಂಟಾಗಿರುವ ಆರ್ಥಿಕ ಹೊರೆಯನ್ನು ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):–

ಅ) ಇಲ್ಲಾ. ಸಾರ್ವಜನಿಕರಿಂದ ಎಫ್.ಎಂ.ಬಿ. ಎಂದು ಕರೆಯಲ್ಪಡುವ ದಾಖಲೆಯು ಬಳ್ಳಾರಿ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ. ಹಾಗೂ ಚಾಮರಾಜನಗರ ಜಿಲ್ಲೆಯ

ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮಾತ್ರ ಚಾಲ್ತಿಯಲ್ಲಿದ್ದು ಇದನ್ನು ಸೇರಿ ಇತರೆ ದಾಖಲೆಗಳ ನಕಲುಗಳನ್ನು ವಿತರಣೆ ಮಾಡಲು ಭೂಮಾಪನ ಆಯುಕ್ತರ ಅಧಿಕೃತ ಜ್ಞಾಪನ ಸಂ.ತಾಂ.(ಆ)20/95-96 ದಿ: 30/10/1995ರಲ್ಲಿ ಹಾಗೂ ಸುತ್ತೋಲೆ ಸಂ.ತಾಂ.(ಆ)ಸುತ್ತೋಲೆ.8/2001-02, ದಿ: 17/01/2002ರಲ್ಲಿ ರೂ.6.00 ಗಳ ಶುಲ್ಕವನ್ನು ನಿಗದಿ ಮಾಡಿದ್ದು ಈಗಲೂ ಸಹ ಇದು ಜಾರಿಯಲ್ಲಿರುತ್ತೆ. ಇಂತಹ ಎಫ್.ಎಂ.ಬಿ. ನಕಲು ಪೂರೈಸಲು ಶುಲ್ಕವನ್ನು ರೂ.6-00ಗಳಿಂದ ರೂ.600-00 ಗಳಿಗೆ ಹೆಚ್ಚಿಸಿರುವುದಿಲ್ಲ. ಆದರೆ ಮ್ಯುಟೇಷನ್ ಪೂರ್ವ ನಕ್ಷೆ ಒದಗಿಸಲು ಈ ಮೊದಲು ನಿಗದಿಪಡಿಸಿದ್ದ ರೂ.403-00 ಗಳ ಶುಲ್ಕವನ್ನು ದಿನಾಂಕ: 12/08/2008 ರಿಂದ ರೂ. 600-00 ಗಳಿಗೆ ಹೆಚ್ಚಿಸಲಾಗಿದೆ.

ಆ) ಉದ್ಭವಿಸುವುದಿಲ್ಲ

ಇ) ಭೂಮಾಪನ ಇಲಾಖೆಯಲ್ಲಿ ಸಾರ್ವಜನಿಕರಿಗೆ ವಿತರಿಸಲಾಗುವ ನಕ್ಷೆಗಳು ಒಂದೇ ಪ್ರಮಾಣದಲ್ಲಿ ಇರದೇ ಗ್ರಾಮಗಳ ವಿಸ್ತೀರ್ಣಕ್ಕನುಗುಣವಾಗಿ ನಕ್ಷೆಗಳು ಚಿಕ್ಕವು ದೊಡ್ಡವು ಆಗುತ್ತವೆ ಮತ್ತು ಈ ನಕ್ಷೆಗಳಿಗೆ ನಿಗದಿಪಡಿಸಲಾದ ಶುಲ್ಕವು ಸರ್ವೆ ನಂಬರು ಚದರ ಇಂಚಿಗೆ ಅನುಗುಣವಾಗಿ ಲೆಕ್ಕ ಹಾಕಿ ನಿಗದಿ ಮಾಡಿದ್ದಾಗಿದೆ. ಇದಲ್ಲದೆ ಇಲಾಖೆಯಲ್ಲಿ ವಿವಿಧ ರೀತಿಯ ನಕ್ಷೆಗಳು ಅಂದರೆ ಟಿಪ್ಪಣಿ, ಎಫ್.ಎಂ.ಬಿ. ಪಿ.ಟಿ.ನಕ್ಷೆ, ಅಟ್ಲಾಸ್, ಪಕ್ಕಾ ಬುಕ್, ನಗರಮಾಪನದನ್ವಯ ತಯಾರಿಸಿದ ವಿವಿಧ ನಕ್ಷೆಗಳು ಒಂದಕ್ಕೊಂದು ವಿಭಿನ್ನವಾಗಿ ಇರುವುದರಿಂದ ಏಕರೂಪದ ದರ ನಿಗದಿಪಡಿಸಲು ಅವಕಾಶವಿರುವುದಿಲ್ಲ. ವಿವಿಧ ನಕಲುಗಳಿಗೆ ಈಗಿರುವ ಶುಲ್ಕವನ್ನು ವೈಜ್ಞಾನಿಕವಾಗಿ ನಿಗಧಿ ಪಡಿಸಲಾಗಿದ್ದು, ಈಗಲೂ ಜಾರಿಯಲ್ಲಿದೆ.

ಪಹಣಿ ಪತ್ರಿಕೆಯ ಲೋಪದೋಷಗಳು

299 (283) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ):- (ಮಾನ್ಯ ಕಂದಾಯ ಸಚಿವರು) ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಅರಣ್ಯ ಇಲಾಖೆಯ ಅಧೀನಕ್ಕೆ ಒಳಪಡದಿದ್ದರೂ ಪಹಣಿ ಪತ್ರಿಕೆಯಲ್ಲಿ ನೂರಾರು ಎಕರೆ ಜಾಗವು "ಅರಣ್ಯ ಇಲಾಖೆ" ಎಂದು ನಮೂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅರಣ್ಯ ಇಲಾಖೆಗೆ ಸೇರಿದ ಜಾಗವನ್ನು ಮಾತ್ರ ನಿರ್ದಿಷ್ಠ ಖಾತೆಯ ಪಹಣಿ ಪತ್ರಿಕೆಯಲ್ಲಿ ದಾಖಲಿಸಿ, ಉಳಿದ ಜಾಗವನ್ನು ಸರ್ಕಾರದ ಹೆಸರಿನಲ್ಲಿ ನಮೂದಿಸಲು